**CC 661/2023**

**PW-01**

**ಸಾಕ್ಷಿಗೆ ದಿನಾಂಕ: 16.12.2024 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದು ಪಾಟೀ ಸವಾಲುಃ ಆರೋಪಿ ಪರ ವಕೀಲರ ಶ್ರೀ KNS ರವರಿಂದಃ**

ಆರೋಪಿತನು ನನ್ನಿಂದ ಮೊದಲಿಗೆ ಎರಡು ಲಕ್ಷ ರೂಪಾಯಿಗಳನ್ನು ಪಡೆದುಕೊಂಡು ಮರಳಿ ನೀಡಿರುತ್ತಾರೆ ಎಂದು ಹೇಳಿದಂತೆ ಅದೇ ಸಮಯದಲ್ಲಿ ಆರೋಪಿತನಿಂದ ನಾನು ಚೆಕ್ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೊದಲಿಗೆ ಆರೋಪಿತನಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಡುವ ಸಮಯದಲ್ಲಿ ಯಾರು ಯಾರು ಹಿರಿಯರು ಇದ್ದರು ಹಾಗೂ ಯಾವಾಗ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಈಗ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ಆರೋಪಿತನು ಮೊದಲು ಪಡೆದುಕೊಂಡ ಎರಡು ಲಕ್ಷ ರೂಪಾಯಿಗಳನ್ನು ಮರಳಿ ಯಾವಾಗ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಕೊಟ್ಟ *2-3* ತಿಂಗಳೊಳಗೆ ಮರಳಿ ಕೊಟ್ಟಿರುತ್ತಾರೆ ಆದರೆ ನಿಖರವಾಗಿ ನೆನಪಿರುವುದಿಲ್ಲ.

ನಾನು ಈ ಪ್ರಕರಣವನ್ನು *4* ಲಕ್ಷ ರೂಪಾಯಿಗಳಿಗಾಗಿ ದಾಖಲು ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ಆರೋಪಿತನೇ ಚೆಕ್ ನಲ್ಲಿ *4* ಲಕ್ಷ ಬರೆದುಕೊಟ್ಟಂತೆ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿತನು ಸದರಿ ಚೆಕ್ ನ್ನು ದಿಃ *14.12.2022* ರಂದು ಬರೆದುಕೊಟ್ಟಿರುತ್ತಾರೆ. ಆರೋಪಿತನಿಗೆ ನಾನು ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆರೋಪಿತನಿಗೆ ಯಾವ ದಿನಾಂಕದಂದು ಹಣವನ್ನು ಪಡೆದಿರುತ್ತಾರೆ ಎಂದರೆ

ಸಾಕ್ಷಿಯು ಜನೇವರಿ *2022* ರಲ್ಲಿ ಪಡೆದಿರುತ್ತಾರೆ ಆದರೆ ನಿಖರವಾರದ ದಿನಾಂಕ ನನಗೆ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಹಣವನ್ನು ನನ್ನಿಂದ ಪಡೆಯಲು ಆರೋಪಿತನೊಬ್ಬನೇ ಬಂದಿರುತ್ತಾನೆ. ಆರೋಪಿತನಿಗೆ ನಾನು *4* ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು *2022* ರಲ್ಲಿ ಮನೆಯನ್ನು ಕಟ್ಟುತ್ತಿದ್ದರು ಎಂದರೆ ಸಾಕ್ಷಿಯು ಮನೆ ಕಟ್ಟುತ್ತಿರಲಿಲ್ಲ ಜಾಗ ತೆಗೆದುಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. *2022* ರಲ್ಲಿ ಮನೆ ಕಟ್ಟುತ್ತಿದ್ದ ಕಾರಣ ಮನೆ ಕಟ್ಟಲು ಸಹಾಯ ಮಾಡುವಂತೆ ಆರೋಪಿತನು ನನ್ನ ಹತ್ತಿರ ಎರಡು ಲಕ್ಷ ರೂಪಾಯಿಗಳನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಜಾಗ ತೆಗೆದುಕೊಳ್ಳವ ಸಲುವಾಗಿ ಆರೋಪಿತನು ನನ್ನ ಹತ್ತಿರ *4* ಲಕ್ಷ ರೂಪಾಯಿಗಳನ್ನು ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನಾನು *2022* ರಲ್ಲಿ ಆರೋಪಿತನು ಮನೆ ಕಟ್ಟುವ ಸಲುವಾಗಿ ನನ್ನ ಹತ್ತಿರ ಕೇವಲ *2* ಲಕ್ಷ ರೂಪಾಯಿಗಳನ್ನು ಮಾತ್ರ ಪಡೆದಿದ್ದರು ಸಹ ನಾನು ಈಗ *4* ಲಕ್ಷ ರೂಪಾಯಿಗಳನ್ನು ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತನ ನಡುವೆ ಈ ಮೊದಲು ಸಹ ಹಣದ ವ್ಯವಹಾರ ಆಗಿದ್ದರು ಆ ವ್ಯವಹಾರವನ್ನು ಆರೋಪಿತನು ಬಗೆಹರಿಸಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಜೊತೆ ಮೊದಲಿಗೆ ಆಗಿರುವ ವ್ಯವಹಾರದ ಸಮಯದಲ್ಲಿ ಪಡೆದುಕೊಂಡಿರುವ ಚೆಕ್ ನ್ನು ಆರೋಪಿತನು ಹಣ ಮರಳಿ ನೀಡಿ ಚೆಕ್ ಕೇಳಿದಾಗ ಮನೆಯಲ್ಲಿರುತ್ತವೆ ಕೊಡುತ್ತೇನೆ ಎಂದು ಹೇಳಿ ಚೆಕ್ ಗಳನ್ನು ಆರೋಪಿತನಿಗೆ ಮರಳಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಸಂಬಂಧ *15* ವರ್ಷಗಳಿಂದ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ *04.03.2022* ರಂದು ಆರೋಪಿತನು ಮನೆ ಕಟ್ಟುತ್ತಿರುವ ಸಮಯದಲ್ಲಿ ಹಣದ ಅಡಚಣೆ ಆದ ಕಾರಣ ನನ್ನ ಹತ್ತಿರ *2* ಲಕ್ಷ ರೂಪಾಯಿಗಳನ್ನು ಕೇಳಿದಾಗ ನಾನು ಕೊಟ್ಟಿರುತ್ತೇನೆ ಹಾಗೂ ಆ ಸಮಯದಲ್ಲಿ ನಾನು ಕೊಟ್ಟ ಹಣದ ಭದ್ರತೆಗಾಗಿ ಆರೋಪಿತನಿಂದ ಎರಡು ಚೆಕ್ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ಚೆಕ್ ನ್ನು ಕೊಟ್ಟ ದಿನವೇ ನಗದೀಕರಣಕ್ಕಾಗಿ ಹಾಕಲು ಹೇಳಿರುತ್ತಾರೆ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ, ಆಲಿಸಿ ಸಮಯವನ್ನು ನೀಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).*

ಓ ಹೇ ಕೇ ಸರಿ ಇದೆ

**ಪ್ರ.ದ.ನ್ಯಾ.ದಂ. ಕಿತ್ತೂರು.**